Test Paper : **III**

Test Subject : **LAW**

Test Subject Code : **K-1814**

Test Booklet Serial No. : ____________________

OMR Sheet No. : ____________________

Roll No. | | | | | | | | |

(Figures as per admission card)

**Name & Signature of Invigilator/s**

Signature: ____________________ Signature: ____________________

Name : ____________________ Name : ____________________

**Paper : III**

**Subject : LAW**

Time : 2 Hours 30 Minutes — Maximum Marks : 150

Number of Pages in this Booklet : **24** — Number of Questions in this Booklet : **75**

**ಅಭ್ಯರ್ಥಿಗಳಿಗೆ ಸೂಚನೆಗಳು**

1. ಈ ಪುಟದ ಮೇಲ್ತುದಿಯಲ್ಲಿ ಒದಗಿಸಿದ ಸ್ಥಳದಲ್ಲಿ ನಿಮ್ಮ ರೋಲ್ ನಂಬರನ್ನು ಬರೆಯಿರಿ.
2. ಈ ಪತ್ರಿಕೆಯು ಬಹು ಆಯ್ಕೆ ವಿಧದ ಎಪ್ಪತ್ತೈದು ಪ್ರಶ್ನೆಗಳನ್ನು ಒಳಗೊಂಡಿದೆ.
3. ಪರೀಕ್ಷೆಯ ಪ್ರಾರಂಭದಲ್ಲಿ, ಪ್ರಶ್ನೆಪುಸ್ತಿಕೆಯನ್ನು ನಿಮಗೆ ನೀಡಲಾಗುವುದು. ಮೊದಲ **5** ನಿಮಿಷಗಳಲ್ಲಿ ನೀವು ಪುಸ್ತಿಕೆಯನ್ನು ತೆರೆಯಲು ಮತ್ತು ಕೆಳಗಿನಂತೆ ಕಡ್ಡಾಯವಾಗಿ ಪರೀಕ್ಷಿಸಲು ಕೋರಲಾಗಿದೆ.
   (i) ಪ್ರಶ್ನೆ ಪುಸ್ತಿಕೆಗೆ ಪ್ರವೇಶಾವಕಾಶ ಪಡೆಯಲು, ಈ ಹೊದಿಕೆ ಪುಟದ ಅಂಚಿನ ಮೇಲಿರುವ ಪೇಪರ್ ಸೀಲನ್ನು ಹರಿಯಿರಿ. ಸ್ಟಿಕ್ಕರ್ ಸೀಲ್ ಇಲ್ಲದ ಪ್ರಶ್ನೆಪುಸ್ತಿಕೆ ಸ್ವೀಕರಿಸಬೇಡಿ. ತೆರೆದ ಪುಸ್ತಿಕೆಯನ್ನು ಸ್ವೀಕರಿಸಬೇಡಿ.
   (ii) **ಪುಸ್ತಿಕೆಯಲ್ಲಿನ ಪ್ರಶ್ನೆಗಳ ಸಂಖ್ಯೆ ಮತ್ತು ಪುಟಗಳ ಸಂಖ್ಯೆಯನ್ನು ಮುಖಪುಟದ ಮೇಲೆ ಮುದ್ರಿಸಿದ ಮಾಹಿತಿಯೊಂದಿಗೆ ತಾಳೆ ನೋಡಿರಿ. ಪುಟಗಳು/ಪ್ರಶ್ನೆಗಳು ಕಾಣೆಯಾದ, ಅಥವಾ ದ್ವಿಪ್ರತಿ ಅಥವಾ ಅನುಕ್ರಮವಾಗಿಲ್ಲದ ಅಥವಾ ಇತರ ಯಾವುದೇ ವ್ಯತ್ಯಾಸದ ದೋಷಪೂರಿತ ಪುಸ್ತಿಕೆಯನ್ನು ಕೂಡಲೆ 5 ನಿಮಿಷದ ಅವಧಿ ಒಳಗೆ, ಸಂವೀಕ್ಷಕರಿಂದ ಸರಿ ಇರುವ ಪುಸ್ತಿಕೆಗೆ ಬದಲಾಯಿಸಿಕೊಳ್ಳಬೇಕು. ಆ ಬಳಿಕ ಪ್ರಶ್ನೆ ಪತ್ರಿಕೆಯನ್ನು ಬದಲಾಯಿಸಲಾಗುವುದಿಲ್ಲ, ಯಾವುದೇ ಹೆಚ್ಚು ಸಮಯವನ್ನೂ ಕೊಡಲಾಗುವುದಿಲ್ಲ.**
4. ಪ್ರತಿಯೊಂದು ಪ್ರಶ್ನೆಗೂ (A), (B), (C) ಮತ್ತು (D) ಎಂದು ಗುರುತಿಸಿದ ನಾಲ್ಕು ಪರ್ಯಾಯ ಉತ್ತರಗಳಿವೆ. ನೀವು ಪ್ರಶ್ನೆಯ ಎದುರು ಸರಿಯಾದ ಉತ್ತರದ ಮೇಲೆ, ಕೆಳಗೆ ಕಾಣಿಸಿದಂತೆ ಅಂಡಾಕೃತಿಯನ್ನು ಕಪ್ಪಾಗಿಸಬೇಕು.
   **ಉದಾಹರಣೆ :** (A) (B) ● (D)
   (C) ಸರಿಯಾದ ಉತ್ತರವಾಗಿದ್ದಾಗ.
5. ಪ್ರಶ್ನೆಗಳಿಗೆ ಉತ್ತರಗಳನ್ನು, **ಪತ್ರಿಕೆ III ಪುಸ್ತಿಕೆಯೊಳಗೆ ಕೊಟ್ಟಿರುವ** OMR **ಉತ್ತರ ಹಾಳೆಯಲ್ಲಿ ಮಾತ್ರವೇ ಸೂಚಿಸತಕ್ಕದ್ದು.** OMR ಉತ್ತರ ಹಾಳೆಯಲ್ಲಿನ ಅಂಡಾಕೃತಿ ಹೊರತುಪಡಿಸಿ ಬೇರೆ ಯಾವುದೇ ಸ್ಥಳದಲ್ಲಿ ಗುರುತಿಸಿದರೆ, ಅದರ ಮೌಲ್ಯಮಾಪನ ಮಾಡಲಾಗುವುದಿಲ್ಲ.
6. OMR ಉತ್ತರ ಹಾಳೆಯಲ್ಲಿ ಕೊಟ್ಟ ಸೂಚನೆಗಳನ್ನು ಜಾಗರೂಕತೆಯಿಂದ ಓದಿರಿ.
7. ಎಲ್ಲಾ ಕರಡು ಕೆಲಸವನ್ನು ಪುಸ್ತಿಕೆಯ ಕೊನೆಯಲ್ಲಿ ಮಾಡತಕ್ಕದ್ದು.
8. ನಿಮ್ಮ ಗುರುತನ್ನು ಬಹಿರಂಗಪಡಿಸಬಹುದಾದ ನಿಮ್ಮ ಹೆಸರು ಅಥವಾ ಯಾವುದೇ ಚಿಹ್ನೆಯನ್ನು, ಸಂಗತವಾದ ಸ್ಥಳ ಹೊರತು ಪಡಿಸಿ, OMR ಉತ್ತರ ಹಾಳೆಯ ಯಾವುದೇ ಭಾಗದಲ್ಲಿ ಬರೆದರೆ, ನೀವು ಅನರ್ಹತೆಗೆ ಬಾಧ್ಯರಾಗಿರುತ್ತೀರಿ.
9. ಪರೀಕ್ಷೆಯು ಮುಗಿದನಂತರ, ಕಡ್ಡಾಯವಾಗಿ OMR ಉತ್ತರ ಹಾಳೆಯನ್ನು ಸಂವೀಕ್ಷಕರಿಗೆ ನೀವು ಹಿಂತಿರುಗಿಸಬೇಕು ಮತ್ತು ಪರೀಕ್ಷಾ ಕೊಠಡಿಯ ಹೊರಗೆ OMR ನ್ನು ನಿಮ್ಮೊಂದಿಗೆ ಕೊಂಡೊಯ್ಯ ಕೂಡದು.
10. ಪರೀಕ್ಷೆಯ ನಂತರ, ಪರೀಕ್ಷಾ ಪ್ರಶ್ನೆ ಪತ್ರಿಕೆಯನ್ನು ಮತ್ತು ನಕಲು OMR ಉತ್ತರ ಹಾಳೆಯನ್ನು ನಿಮ್ಮೊಂದಿಗೆ ತೆಗೆದುಕೊಂಡು ಹೋಗಬಹುದು.
11. **ನೀಲಿ/ಕಪ್ಪು ಬಾಲ್‌ಪಾಯಿಂಟ್ ಪೆನ್ ಮಾತ್ರವೇ ಉಪಯೋಗಿಸಿರಿ.**
12. **ಕ್ಯಾಲ್ಕುಲೇಟರ್ ಅಥವಾ ಲಾಗ್ ಟೇಬಲ್ ಇತ್ಯಾದಿಯ ಉಪಯೋಗವನ್ನು ನಿಷೇಧಿಸಲಾಗಿದೆ.**
13. **ಸರಿ ಅಲ್ಲದ ಉತ್ತರಗಳಿಗೆ ಋಣ ಅಂಕ ಇರುವುದಿಲ್ಲ.**

**Instructions for the Candidates**

1. Write your roll number in the space provided on the top of this page.
2. This paper consists of seventy five multiple-choice type of questions.
3. At the commencement of examination, the question booklet will be given to you. In the first 5 minutes, you are requested to open the booklet and compulsorily examine it as below :
   (i) To have access to the Question Booklet, tear off the paper seal on the edge of this cover page. Do not accept a booklet without sticker-seal and do not accept an open booklet.
   (ii) **Tally the number of pages and number of questions in the booklet with the information printed on the cover page. Faulty booklets due to pages/questions missing or duplicate or not in serial order or any other discrepancy should be got replaced immediately by a correct booklet from the invigilator within the period of 5 minutes. Afterwards, neither the Question Booklet will be replaced nor any extra time will be given.**
4. Each item has four alternative responses marked (A), (B), (C) and (D). You have to darken the oval as indicated below on the correct response against each item.
   **Example** : (A) (B) ● (D)
   where (C) is the correct response.
5. Your responses to the question of Paper III are to be indicated in the **OMR Sheet kept inside the Booklet**. If you mark at any place other than in the ovals in OMR Answer Sheet, it will not be evaluated.
6. Read the instructions given in OMR carefully.
7. Rough Work is to be done in the end of this booklet.
8. If you write your name or put any mark on any part of the OMR Answer Sheet, except for the space allotted for the relevant entries, which may disclose your identity, you will render yourself liable to disqualification.
9. You have to return the test OMR Answer Sheet to the invigilators at the end of the examination compulsorily and must NOT carry it with you outside the Examination Hall.
10. You can take away question booklet and carbon copy of OMR Answer Sheet soon after the examination.
11. **Use only Blue/Black Ball point pen.**
12. **Use of any calculator or log table etc., is prohibited.**
13. **There is no negative marks for incorrect answers.**

# ಕಾನೂನು
## ಪೇಪರ್ – III

**ಗಮನಿಸಿ :** ಈ ಪತ್ರಿಕೆಯು **(75) ಎಪ್ಪತ್ತೈದು** ವಸ್ತುನಿಷ್ಠ ಮಾದರಿಯ ಪ್ರಶ್ನೆಗಳನ್ನೊಳಗೊಂಡಿದ್ದು, **ಪ್ರತಿಯೊಂದು** ಪ್ರಶ್ನೆಯೂ **ಎರಡು (2)** ಅಂಕಗಳನ್ನು ಹೊಂದಿದೆ. **ಎಲ್ಲಾ** ಪ್ರಶ್ನೆಗಳನ್ನೂ **ಕಡ್ಡಾಯವಾಗಿ** ಉತ್ತರಿಸಬೇಕು.

**1.** ಭಾರತದ ಸಂವಿಧಾನದ ವಿಶಿಷ್ಟ ಲಕ್ಷಣಗಳು __________ ಒದಗಿಸಿವೆ.

1) ಇಡೀ ಭಾರತಕ್ಕೆ ಏಕ ಪೌರತ್ವ

2) ಬಿಗಿಯಾದ ಒಕ್ಕೂಟ ರೂಪದ ಸರಕಾರ

3) ಅನಮ್ಯ ಮತ್ತು ನಮ್ಯದ ಅನನ್ಯ ಸುಮಿಶ್ರಣ

ಮೇಲಿನ ಹೇಳಿಕೆಗಳಲ್ಲಿ

(A) 1, 2, ಮತ್ತು 3 ಸರಿ

(B) 1 ಮತ್ತು 2 ಸರಿ

(C) 2 ಮತ್ತು 3 ಸರಿ

(D) 1 ಮತ್ತು 3 ಸರಿ

**2.** ವಿಧಿ 15ರ ಅಡಿಯಲ್ಲಿ ಭೇದ –ಭಾವದಿಂದ ರಕ್ಷಣೆ ಯಾರಿಗೆ ಲಭ್ಯವಿದೆ ?

(A) ವ್ಯಕ್ತಿಗಳಿಗೆ

(B) ಪೌರರಿಗೆ

(C) ಪೌರರು ಮತ್ತು ಪೌರರಲ್ಲದವರಿಗೆ

(D) ವಿದೇಶಿಯರನ್ನು ಹೊರತು ಪಡಿಸಿದ ವ್ಯಕ್ತಿಗಳು

**3.** ಸರಿಯಾದ ಹೇಳಿಕೆಯನ್ನು ಗುರುತಿಸಿರಿ.

(A) ಚಲಾಯಿಸಿದ ಮತಗಳಲ್ಲಿ 4% ಮತಗಳನ್ನು 4 ಅಥವಾ ಹೆಚ್ಚು ರಾಜ್ಯಗಳಲ್ಲಿ ಗಳಿಸಿದ ಪಕ್ಷವನ್ನು ರಾಷ್ಟ್ರೀಯ ಪಕ್ಷ ಎಂದು ಮಾನ್ಯ ಮಾಡಲಾಗುತ್ತದೆ.

(B) ರಾಜ್ಯದಲ್ಲಿ ಚಲಾಯಿಸಲಾದ ಮತಗಳಲ್ಲಿ 4% ಮತಗಳಿಸಿದ ಪಕ್ಷವನ್ನು ಪ್ರಾದೇಶಿಕ ಪಕ್ಷ ಎಂದು ಮಾನ್ಯಮಾಡಲಾಗುತ್ತದೆ.

(C) A) ಮತ್ತು B) ಎರಡು ಕೂಡ

(D) A) ಮಾತ್ರ

**4.** **ದೃಢ ಹೇಳಿಕೆ (A) :** ರಾಜ್ಯ ನಿರ್ದೇಶಕ ತತ್ವಗಳು ಯಾವುದೇ ರಾಜ್ಯದಿಂದ ಜಾರಿಗೊಳಿಸತಕ್ಕದ್ದಲ್ಲ.

**ಸಮರ್ಥನೆ (R) :** ಆಡಳಿತದಲ್ಲಿ ರಾಜ್ಯ ನಿರ್ದೇಶಕ ತತ್ವಗಳು ಹೆಚ್ಚು ಕಡಿಮೆ ಮೂಲಭೂತವಾಗಿದೆ.

(A) (A) ಮತ್ತು (R) ಎರಡೂ ಸರಿ ಮತ್ತು (R), (A) ಯ ಸರಿಯಾದ ವಿವರಣೆ

(B) (A) ಮತ್ತು (R) ಎರಡೂ ಸರಿ ಆದರೆ (R), (A) ಯ ಸರಿಯಾದ ವಿವರಣೆ ಅಲ್ಲ

(C) (A) ಸರಿ ಆದರೆ (R) ತಪ್ಪು

(D) (A) ತಪ್ಪು ಆದರೆ (R) ಸರಿ

**5.** ಭಾರತದ ಸಂವಿಧಾನದ 7ನೇ ಅನುಸೂಚಿ ಏನನ್ನು ಒಳಗೊಂಡಿದೆ ?

(A) ಕೇಂದ್ರಪಟ್ಟಿ, ರಾಜ್ಯಪಟ್ಟಿ, ಸಮವರ್ತಿಪಟ್ಟಿ

(B) ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳು

(C) ರಾಜ್ಯ ಸಭೆಯಲ್ಲಿ ಸೀಟುಗಳ ಹಂಚಿಕೆ

(D) ರಾಷ್ಟ್ರಪತಿ ಮತ್ತು ರಾಜ್ಯಗಳ ರಾಜ್ಯಪಾಲರ ವೇತನಗಳು ಇತ್ಯಾದಿ

**6.** ಡಾ II ಬಿ. ಆರ್. ಅಂಬೇಡ್ಕರ್ ಪ್ರಕಾರ, ಸಂವಿಧಾನದ ಕೆಳಗಿನ ಯಾವ ವಿಧಿಗಳು ಸಂವಿಧಾನದ 'ಹೃದಯ ಮತ್ತು ಆತ್ಮ' ಎಂದು ಪರಿಗಣಿಸಲ್ಪಟ್ಟಿದೆ ?

(A) ವಿಧಿ – 21

(B) ವಿಧಿ – 19

(C) ವಿಧಿ – 32

(D) ವಿಧಿ – 14

# LAW
## Paper – III

**Note :** This paper contains **seventy-five (75)** objective type questions. **Each** question carries **two (2)** marks. **All** questions are **compulsory**.

**1.** The salient features of the Indian Constitution provide for

1) Single citizenship for whole of India
2) Strict federal form of Government
3) Unique blend of rigidity and flexibility

Of the above statements

(A) 1, 2 and 3 are correct
(B) 1 and 2 are correct
(C) 2 and 3 are correct
(D) 1 and 3 are correct

**2.** Protection from discrimination under Article 15 is available to

(A) Persons
(B) Citizens
(C) Citizens and non-citizens
(D) Persons except aliens

**3.** Mark the correct statement :

(A) A party which secures four percentage of the votes polled in four or more States is recognised as a National Party.
(B) A party which secures four percent of votes polled in the State is recognised as a State or Regional Party.
(C) Both A and B.
(D) Only A.

**4.** **Assertion (A)** : Directive Principles are not enforceable by any court.

**Reason (R)** : Directive Principles are more or less fundamental in governance of the country.

(A) Both (A) and (R) are true and (R) is the correct explanation of (A)
(B) Both (A) and (R) are true but (R) is not the correct explanation of (A)
(C) (A) is true but (R) is false
(D) (A) is false but (R) is true

**5.** The Seventh Schedule of the Indian Constitution contains

(A) Union list, State list and Concurrent list
(B) States and Union territory
(C) Allocation of seats in the Rajya Sabha
(D) Salaries of the President, Governor of States etc.

**6.** Which of the following Article in the Constitution is considered as 'heart and soul' of the Constitution as per Dr. B.R. Ambedkar ?

(A) Article 21
(B) Article 19
(C) Article 32
(D) Article 14

7. ಮೂಲಭೂತ ಕರ್ತವ್ಯಗಳನ್ನು ಸಂವಿಧಾನದಲ್ಲಿ ಯಾವ ತಿದ್ದುಪಡಿ ಮೂಲಕ ಅಳವಡಿಸಲಾಗಿದೆ ?
(A) 44ನೇ ತಿದ್ದುಪಡಿ
(B) 24ನೇ ತಿದ್ದುಪಡಿ
(C) 47ನೇ ತಿದ್ದುಪಡಿ
(D) 42ನೇ ತಿದ್ದುಪಡಿ

8. ಸಂವಿಧಾನದಲ್ಲಿ ಉಳಿಕೆ (ಶೇಷ) ಅಧಿಕಾರವನ್ನು ಯಾರಲ್ಲಿ ನಿಹಿತಗೊಳಿಸಲಾಗಿದೆ ?
(A) ಕಾರ್ಯಾಂಗ
(B) ರಾಜ್ಯ ಶಾಸಕಾಂಗ
(C) ಸಂಸತ್ತು
(D) ನ್ಯಾಯಾಂಗ

9. ಆಡಳಿತಾತ್ಮಕ ಕಾನೂನಿನ ವಿಕಸನಕ್ಕೆ ಕೆಳಗಿನ ಯಾವುದು ಮುಖ್ಯ ಕಾರಣವಾಗಿದೆ ?
(A) ಔದ್ಯೋಗಿಕ ಕ್ರಾಂತಿ (ಕೈಗಾರಿಕಾ ಕ್ರಾಂತಿ)
(B) ಸಮಾಜ ಕಲ್ಯಾಣ ರಾಜ್ಯದ ಉದಯ
(C) ಜಾಗತೀಕರಣದ ಉದಯ
(D) ಮಾನವ ಹಕ್ಕುಗಳ ಪರಿಕಲ್ಪನೆಯ ವಿಕಸನ

10. ಕೆಳಗಿನವುಗಳಲ್ಲಿ ಯಾವುದು ತೃಪ್ತಿಕರವಾದ ವಿಚಾರಣೆಯ ಅಗತ್ಯ ಅಂಶ ಅಲ್ಲ ?
(A) ಸೂಕ್ತ ಸೂಚನೆ
(B) ಸಾಕ್ಷಿ ಮಂಡಿಸಲು ಅವಕಾಶ
(C) ಸಾಕ್ಷಿ ಸುಳ್ಳೆಂದು ಋಜುವಾತು ಪಡಿಸಲು ಅವಕಾಶ
(D) ನ್ಯಾಯವಾದಿಯನ್ನು ಗೊತ್ತುಮಾಡುವ ಹಕ್ಕು

11. ಎ.ಕೆ. ಕೈಪಾಕ್ ಪ್ರಕರಣವು ಯಾವುದಕ್ಕೆ ಸಂಬಂಧ ಪಟ್ಟಿದೆ ?
(A) ಪಕ್ಷಪಾತದ ವಿರುದ್ಧ ನಿಯಮ
(B) ನಿಯೋಜಿತ ಶಾಸನಾಧಿಕಾರ
(C) ವಿವೇಚನೆಯ ದುರುಪಯೋಗ
(D) ರಾಜ್ಯದ ಒಪ್ಪಂದದ (ಗುತ್ತಿಗೆಯ) ಬಾಧ್ಯತೆ

12. __________ ನಿಂದ ಮೂಲಭೂತ ಹಕ್ಕಿನ ಉಲ್ಲಂಘನೆ ಅಥವಾ ಅತಿಕ್ರಮಣ ಆದಾಗ, ವಿಧಿ 32ರ ಅಡಿಯಲ್ಲಿ ಮ್ಯಾಂಡೇಮಸ್ ಹೊರಡಿಸಲಾಗದು.
(A) ಶಾಸನ
(B) ಶಾಸನಬದ್ಧ ಆದೇಶ
(C) ಕಾರ್ಯಾಂಗದ ಆದೇಶ
(D) ಖಾಸಗಿ ವ್ಯಕ್ತಿ / ಸಂಸ್ಥೆ

13. ಈ ಕೆಳಗಿನ ಯಾವುದು ವಿವೇಚನೆಯನ್ನು ಚಲಾಯಿಸದಿರುವುದಕ್ಕೆ ಪ್ರೇರಣೆಯಲ್ಲ ?
(A) ದುರುದ್ದೇಶದ ಅಧಿಕಾರ ಚಲಾಯಿಸುವಿಕೆ
(B) ಬುದ್ಧಿಶಕ್ತಿ ಉಪಯೋಗಿಸದಿರುವುದು
(C) ಆಜ್ಞಾಪಿಸಿದ್ದಕ್ಕೆ ಸರಿಯಾಗಿ ವರ್ತಿಸುವುದು
(D) ಶೋಧಿಸುವುದು

14. ಲೋಕಪಾಲ ಸಂಸ್ಥೆಯನ್ನು ಏತಕ್ಕಾಗಿ ಸ್ಥಾಪಿಸಿದರು ?
(A) ಭ್ರಷ್ಟಾಚಾರ ತಡೆಯುವುದಕ್ಕಾಗಿ
(B) ದುರಾಡಳಿತ ತಡೆಯುವುದಕ್ಕಾಗಿ
(C) ಭ್ರಷ್ಟಾಚಾರ ಮತ್ತು ದುರಾಡಳಿತ ತಡೆಯಲು
(D) ಸರಕಾರದ ಆರ್ಥಿಕ ಅಧಿಕಾರದ ದುರುಪಯೋಗ ತಡೆಯಲು

**7.** Fundamental Duties were inserted in the Constitution by

(A) 44th Amendment

(B) 24th Amendment

(C) 47th Amendment

(D) 42nd Amendment

**8.** Residuary powers under the Constitution are vested in the

(A) Executive

(B) State Legislations

(C) Parliament

(D) Judiciary

**9.** Which of the following is the main reason for the evolution of Administrative Law ?

(A) Industrial Revolution

(B) Emergence of Social Welfare State

(C) Emergence of Globalisation

(D) Evolution of the concept of Human Rights

**10.** Which of the following is not an essential aspect of fair hearing ?

(A) Proper notice

(B) Opportunity to adduce evidence

(C) Opportunity to rebutt evidence

(D) Right to engage lawyer

**11.** A.K. Kraipak case is related to

(A) Rule against bias

(B) Delegated legislation

(C) Abuse of discretion

(D) States contractual liability

**12.** Mandamus can not be issued under Article 32 where a fundamental right is inbringed by

(A) a statute

(B) statutory order

(C) executive order

(D) private body

**13.** Which of the following is not an instance of non-exercise of discretion ?

(A) Malafide exercise of power

(B) Non-application of mind

(C) Acting under dictation

(D) Filtering

**14.** Institution of Lokpal is established for

(A) Prevention of corruption

(B) Prevention of Mal administration

(C) Prevention of Mal administration and corruption

(D) Prevention of misuse of financial powers of the Government

**15.** ಪಟ್ಟಿ – I ನ್ನು ಪಟ್ಟಿ – II ರೊಂದಿಗೆ ಹೊಂದಿಸಿರಿ. ಪಟ್ಟಿಗಳ ಕೆಳಗೆ ಕೊಟ್ಟ ಸಂಕೇತ ಉಪಯೋಗಿಸಿ ಸರಿಯಾದ ಉತ್ತರ ಆಯ್ಕೆ ಮಾಡಿ :

| ಪಟ್ಟಿ – I | ಪಟ್ಟಿ – II |
|---|---|
| a) ಆಸಾಮಿಯ ಪ್ರತ್ಯಕ್ಷ ಹಾಜರಿ | 1) ಸ್ವಭಾವಿಕ ನ್ಯಾಯದ ಉಲ್ಲಂಘನೆ |
| b) ನ್ಯಾಯಿಕ ಪರಮಾದೇಶ | 2) ಕಾನೂನು ಬಾಹಿರ ಸೆರೆವಾಸ |
| c) ಕೋ–ವಾರಂಟೊ | 3) ಅಧಿಕಾರ ಕ್ಷೇತ್ರವಿಲ್ಲದೆ ಅಧಿಕಾರ ಚಲಾಯಿಸುವಿಕೆ |
| d) ಸರ್‌ಷಿಯೊರರಿ | 4) ಸಾರ್ವಜನಿಕ (ಸರಕಾರಿ) ಕೆಲಸ ನಿರ್ವಹಿಸದಿರುವುದು |

**ಸಂಕೇತಗಳು :**

| | a | b | c | d |
|---|---|---|---|---|
| (A) | 1 | 4 | 3 | 2 |
| (B) | 2 | 4 | 3 | 1 |
| (C) | 1 | 3 | 4 | 2 |
| (D) | 2 | 3 | 4 | 1 |

**16.** ಕೆಳಗಿನವುಗಳಲ್ಲಿ ಯಾವುದು ವಿವೇಚನೆಯ ಮೂಲ ಲಕ್ಷಣ ?

(A) ಪರ್ಯಾಯಗಳ ನಡುವೆ ಆಯ್ಕೆ ಮಾಡುವ ಅಧಿಕಾರ

(B) ಶಾಸನಗಳು ಪ್ರಧಾನ ಮಾಡಿದ ಅಧಿಕಾರ ಚಲಾಯಿಸಿ ನಿಯಮಗಳನ್ನು ಮಾಡುವ ಅಧಿಕಾರ

(C) ಅಧೀನ ಅಧಿಕಾರಿಗಳ ತೀರ್ಮಾನಗಳನ್ನು ಪುನರ್ವಿಮರ್ಶೆ/ಪರಿಶೀಲನೆ ಮಾಡುವ ಅಧಿಕಾರ

(D) ಆಡಳಿತಾತ್ಮಕ ವಿವಾದಗಳಿಗೆ ತೀರ್ಪು ನೀಡುವ ಅಧಿಕಾರ

**17.** ಕಾನೂನಿನ ಊರ್ಜಿತ ಮೂಲವಾಗಲು ಸಂಪ್ರದಾಯ ಈಡೇರಿಸಬೇಕಾದ ಅಗತ್ಯ ಆವಶ್ಯಕತೆ ಕೆಳಗಿನವುಗಳಲ್ಲಿ ಯಾವುದು ?

I) ಪ್ರಾಚೀನತೆ, ನಿಶ್ಚಿತತೆ ಮತ್ತು ಸ್ಥಿರತೆ

II) ಉತ್ಕೃಷ್ಟತೆ, ಸಹಜತೆ ಮತ್ತು ಫಲದಾಯಕತೆ

III) ನಿರಂತರತೆ, ಪ್ರಾಚೀನತೆ ಮತ್ತು ಶಾಸನ ಕಾನೂನಿಗೆ ಅನುರೂಪತೆ

ಕೆಳಗಿನ ಸಂಕೇತ ಉಪಯೋಗಿಸಿ ಉತ್ತರ ಆಯ್ಕೆ ಮಾಡಿ.

(A) I, II ಮತ್ತು III (B) I ಮತ್ತು II

(C) II ಮತ್ತು III (D) I ಮತ್ತು III

**18.** ''ಸ್ವಾಧೀನತೆ ಅಂದರೆ ಕಾನೂನಿನ ಒಂಭತ್ತು ಅಂಶಗಳು''–ಇದರಲ್ಲಿ ಅಡಗಿರುವ ಅರ್ಥ

(A) ಸ್ವಾಧೀನತೆಯು ಕಾನೂನಿನ ಶುದ್ಧ ತಾಂತ್ರಿಕ ಪರಿಭಾಷೆಯಾಗಿ ಬಿಟ್ಟಿದೆ

(B) ಯಾರೊ ಒಬ್ಬ ಒಂದು ವರಿಷ್ಠ ಹಕ್ಕು ಸ್ಥಾಪಿಸುತ್ತಾನೆ–ಈ ತರದಲ್ಲಿ ಪ್ರತಿಕೂಲ ಸ್ಥಾಪನೆ ಆಗದಿದ್ದರೆ ಸ್ವಾಧೀನತೆ ಇರುವ ಒಬ್ಬ ವ್ಯಕ್ತಿ ಮಾಲಿಕನಾಗುತ್ತಾನೆ

(C) ಸ್ವಾಧೀನತೆ ಎಂಬುದು ಕಾನೂನಿನ ವೇರಿಯೇಬಲ್ ಪರಿಕಲ್ಪನೆಯಾಗಿದೆ

(D) ಮೇಲುಗೈ ತೋರಿಸಲು ಅಧಿಕಾರ

**19.** ಒಬ್ಬ ವ್ಯಕ್ತಿ ಅಂದರೆ, ಕಾನೂನು ____________ನ ಸಾಮರ್ಥ್ಯವುಳ್ಳದ್ದು ಎಂದು ಪರಿಗಣಿಸುವ ಯಾವುದೇ ಜೀವ.

(A) ಹಕ್ಕುಗಳು ಮಾತ್ರ

(B) ಕರ್ತವ್ಯಗಳು ಮಾತ್ರ

(C) ಅಧಿಕಾರಗಳು ಮಾತ್ರ

(D) ಹಕ್ಕುಗಳು ಅಥವಾ ಕರ್ತವ್ಯಗಳು

**15.** Match List I with List II and select correct answer using codes given below the Lists :

| List – I | List – II |
|---|---|
| a) Habeas corpus | 1) Violation of natural justice |
| b) Mandamus | 2) Unlawful detention |
| c) Quo-warranto | 3) Exercise of power without jurisdiction |
| d) Certiorari | 4) Non-performance of public duty |

**Codes :**

| | a | b | c | d |
|---|---|---|---|---|
| (A) | 1 | 4 | 3 | 2 |
| (B) | 2 | 4 | 3 | 1 |
| (C) | 1 | 3 | 4 | 2 |
| (D) | 2 | 3 | 4 | 1 |

**16.** Which of the following is the basic feature of discretion ?

(A) Power to make choice between alternatives

(B) Power to make rules in exercise of powers confirmed by statutes

(C) Power to review the decisions of subordinate officers

(D) Power to adjudicate administrative disputes

**17.** Which of the following requisites are necessary to be fulfilled for a custom to be a valid source of law ?

I) Antiquity , certainty and consistency

II) Specificity, Spontaneity and efficacy

III) Continuity, antiquity and confirmity to statute law

Select the correct answer using codes given below :

**Codes :**

(A) I, II and III

(B) I and II

(C) II and III

(D) I and III

**18.** 'Possession is nine points of law'. It implies

(A) Possession has become pure technicality of the law

(B) A person in possession is owner unless the contrary established, for example someone establishes a Superior title.

(C) Possession is a variable concept of the law

(D) Power to dominate

**19.** A person is any being whom the law regards as capable of

(A) Rights only

(B) Duties only

(C) Powers only

(D) Rights or duties

**20.** ''ರೆಸ್ ನಲ್ಲಿಯಸ್'' ಏನನ್ನು ಸೂಚಿಸುತ್ತದೆ ?

(A) ಕಾನೂನು ನಿಗದಿಪಡಿಸಿದ ಸಮಯ ಕಳೆದ ಮೇಲೆ ಪಡೆದ ಒಂದು ಕೇಸ್‌ಮೆಂಟ್‌ನ ಹಕ್ಕು

(B) ಮರದ ಮಾಲಕನಿಗೆ ಹಣ್ಣುಗಳ ಮೇಲೆ ಹಕ್ಕು ಇದೆ

(C) ಈ ಹಿಂದೆ ಮಾಲಕನಿಲ್ಲದಿದ್ದ ವಸ್ತುವಿಗೆ, ಅದನ್ನು ಯಾರು ಮೊದಲು ತೆಗೆದು ಕೊಳ್ಳುತ್ತಾನೋ ಅವನೇ ಮಾಲಕನಾಗುತ್ತಾನೆ

(D) ಸ್ವತಂತ್ರ ಪ್ರತಿಕೂಲದಿಂದ ಮೊದಲಿದ್ದ ಮಾಲಕತ್ವ ಅಂತ್ಯವಾಗಿದೆಯೊ ಅಲ್ಲಿ

**21.** ಹಕ್ಕುಗಳಿಗೆ ಅದರ ಬೇರೆ ಬೇರೆ ರೂಪ ಮತ್ತು ವೈರುಧ್ಯಗಳ ಸಂಬಂಧದಲ್ಲಿ ಕೆಳಗಿನ ಯಾವುದು ಸರಿ ಅಲ್ಲ ?

(A) ಹಕ್ಕು – ಹಕ್ಕು ಇಲ್ಲದಿರುವುದು

(B) ಸ್ವಾತಂತ್ರ್ಯ –ಕರ್ತವ್ಯ

(C) ಅಧಿಕಾರ– ನಿರೋಧ

(D) ನಿರೋಧ – ಬಾಧ್ಯತೆ

**22.** ಪೂರ್ವ ನಿದರ್ಶನದ ಸಿದ್ಧಾಂತವು ಯಾವುದರ ಮೇಲೆ ಆಧರಿಸಿದೆ ?

(A) ಒಂದೇ ತರದ ಪ್ರಕರಣಗಳು ಒಂದೇ ತರದಲ್ಲಿ ನಿರ್ಣಯ

(B) ಸ್ಟೇರ್ ಡೆಸಿಸಿಸ್

(C) ನ್ಯಾಯಿಕ ಪ್ರತಿಬಂಧ

(D) ಮೇಲಿನ (A) ಮತ್ತು (B) ಎರಡೂ

**23.** ಕಾನೂನಿನ ಸಾಮಾಜಿಕ ಕಾರ್ಯಗಳಿಗೆ ಸಂಬಂಧಪಟ್ಟು ಕೆಳಗಿನ ಹೇಳಿಕೆಗಳಲ್ಲಿ ಯಾವುದು ಸತ್ಯ/ಸರಿ ?

(A) ಕಾನೂನು ಮಾತ್ರವೇ ಸಾಮಾಜಿಕ ನಿಯಂತ್ರಣದ ಸಾಧನವಾಗಿದೆ

(B) ಕಾನೂನು ಮಾತ್ರವೇ ಸಾಮಾಜಿಕ ಬದಲಾವಣೆಯ ಸಾಧನವಾಗಿದೆ.

(C) ಕಾನೂನು ಸಾಮಾಜಿಕ ಬದಲಾವಣೆಯಿಂದ ಸ್ವತಂತ್ರವಾಗಿದೆ

(D) ಕಾನೂನು, ಸಾಮಾಜಿಕ ನಿಯಂತ್ರಣದ ಅನೇಕ ಸಾಧನಗಳಲ್ಲಿ ಒಂದು ಮತ್ತು ಒಂದು ಸಾಮಾಜಿಕ ಬದಲಾವಣೆಯ ಸಲಕರಣೆ ಆಗಿದೆ

**24.** ''ಸಾಮಾಜಿಕ ವ್ಯವಸ್ಥೆಗೊಳಿಸುವಿಕೆ '' (ಸೋಶಿಯಲ್ ಇಂಜಿನಿಯರಿಂಗ್) ಯ ಸಿದ್ಧಾಂತವನ್ನು ಯಾರು ಪ್ರತಿಪಾದಿಸಿದರು ?

(A) ಸಾಲ್‌ಮಾಂಡ್

(B) ರೊಸ್ಕೋ ಪೌಂಡ್

(C) ಡಯಾಸ್

(D) ಕೆಲ್ಸನ್

**25.** ಕ್ರಿಮಿನಲ್ ಬಾಧ್ಯತೆಯಿಂದ ವಿನಾಯಿತಿಗೊಳಪಡಲು ಮಗುವಿಗಿರಬೇಕಾದ ವಯಸ್ಸೆಷ್ಟು ?

(A) 10 ವರ್ಷಕ್ಕಿಂತ ಕಡಿಮೆ

(B) 7 ವರ್ಷಕ್ಕಿಂತ ಕಡಿಮೆ

(C) 6 ವರ್ಷಕ್ಕಿಂತ ಕಡಿಮೆ

(D) 12 ವರ್ಷಕ್ಕಿಂತ ಕಡಿಮೆ

**26.** IPC ಪರಿಚ್ಛೇದ 41 ರಲ್ಲಿ ವ್ಯಾಖ್ಯಾನಿಸಲ್ಪಟ್ಟಂತೆ ವಿಶೇಷ ಕಾನೂನು ಅಂದರೆ

(A) ಒಂದು ನಿರ್ದಿಷ್ಟ ವಿಷಯಕ್ಕೆ ಅನ್ವಯವಾಗುವ ಕಾನೂನು

(B) ಭಾರತದ ಒಂದು ನಿರ್ದಿಷ್ಟ ಭಾಗಕ್ಕೆ ಅನ್ವಯವಾಗುವ ಕಾನೂನು

(C) ಒಂದು ವರ್ಗಕ್ಕೆ ಅನ್ವಯವಾಗುವ ಕಾನೂನು

(D) ಒಂದು ಸ್ಥಳೀಯ ಸಮುದಾಯಕ್ಕೆ ಅನ್ವಯವಾಗುವ ಕಾನೂನು

**27.** ಕ್ರಿಮಿನಲ್ ದುರ್ವಿನಿಯೋಗದ ವಿಶಿಷ್ಟ ಲಕ್ಷಣ/ಚಿಹ್ನೆ ಯಾವುದು ?

(A) ಅಪ್ರಮಾಣಿಕ ಆಶಯ/ಉದ್ದೇಶ

(B) ಸ್ವಾಧೀನದಲ್ಲಿಟ್ಟುಕೊಂಡಿರುವುದು

(C) ಚರ ಆಸ್ತಿ

(D) ನಂಬಿಕೆ ದ್ರೋಹ/ವಿಶ್ವಾಸ ಭಂಗ

**20.** ‘Res nullius’ implies

(A) A right of casement acquired after a passage of time prescribed by law

(B) Owner of a tree has the rights to the fruits

(C) For a previously ownerless object, who took it first became the owner

(D) Where there is extinction of previous ownership by an independent adverse out of acquirer

**21.** Which of the following is incorrect in relation to rights in its various forms and its opposites ?

(A) Right – No Right

(B) Liberty – Duty

(C) Power – Immunity

(D) Immunity – Liability

**22.** The doctrine of precedent is based on

(A) Like cases should be decided alike

(B) Stare decisis

(C) Judicial restraint

(D) Both (A) and (B) above

**23.** Which of the following statement is true in relation to social functions of law ?

(A) Law is the only means of social control

(B) Law is the only means of social change

(C) Law is independent of social changes

(D) Law is one of the several means of social control and an instrument of social change

**24.** Who profounded theory of ‘social engineering’ ?

(A) Salmond

(B) Roscoe Pound

(C) Dias

(D) Kelson

**25.** What is the age of a child it he is to be exempted from criminal liability ?

(A) Below 10 years

(B) Below 7 years

(C) Below 6 years

(D) Below 12 years

**26.** Special law as defined in Section 41 IPC means

(A) Law applicable to a particular subject

(B) Law applicable to a particular part of India

(C) Law applicable to a class

(D) Law applicable to a local community

**27.** The hall mark of criminal mis-appropriation is

(A) dishonest intention

(B) retention

(C) movable property

(D) breach of trust

**28**. ಅನ್ಯಾಯದ/ಬಲಾತ್ಕಾರದ ಸುಲಿಗೆ ಎಂಬುದು _______ ಗಳ ಮಧ್ಯದ್ದು

(A) ಮೋಸ ಮಾಡುವುದು ಮತ್ತು ಕ್ರಿಮಿನಲ್ ದುರ್ವಿನಿಯೋಗ

(B) ದರೋಡೆ ಮತ್ತು ಡಕಾಯಿತಿ

(C) ಕಳ್ಳತನ ಮತ್ತು ದರೋಡೆ

(D) ಕ್ರಿಮಿನಲ್ ವಿಶ್ವಾಸ ದ್ರೋಹ ಮತ್ತು ಕ್ರಿಮಿನಲ್ ದುರ್ವಿನಿಯೋಗ

**29**. IPC ಯ ಪರಿಚ್ಛೇದ 361 ರ ಪ್ರಕಾರ ಅಪಹರಣದ ಅಪರಾಧ ಯಾವುದು ?

(I) ಯಾವುದೇ ಅಪ್ರಾಪ್ತನನ್ನು ತೆಗೆದುಕೊಳ್ಳುವುದು ಅಥವಾ ಆಮಿಷ ಒಡ್ಡಿ ಆಕರ್ಷಿಸುವುದು

(II) ಅಪ್ರಾಪ್ತ ಅಂದರೆ 18 ವರ್ಷದೊಳಗಿನ ಹುಡುಗಿ ಅಥವಾ 16 ವರ್ಷದೊಳಗಿನ ಹುಡುಗ

(III) ಅವನು ಬುದ್ಧಿಮಾಂದ್ಯನಾಗಿದ್ದರೆ ಅಂತಹ ವ್ಯಕ್ತಿಯ ಕಾನೂನಿಗನುಸಾರವಾದ ಮಾಲಕತ್ವವನ್ನು ತೆಗೆದುಹಾಕುವುದು

(IV) ಅಪ್ರಾಪ್ತ ಅಂದರೆ 18 ವರ್ಷಪ್ರಾಯದೊಳಗಿನ ಹುಡುಗಿ ಅಥವಾ 21 ವರ್ಷದೊಳಗಿನ ಹುಡುಗ

ಸಂಕೇತ ಉಪಯೋಗಿಸಿ ಸರಿ ಉತ್ತರ ಕೊಡಿರಿ.

**ಸಂಕೇತಗಳು :**

(A) I, II ಮತ್ತು IV ಸರಿಯಾದವುಗಳು

(B) I ಮತ್ತು II ಸರಿಯಾದವುಗಳು

(C) I, III ಮತ್ತು IV ಸರಿಯಾದವುಗಳು

(D) I, II ಮತ್ತು III ಸರಿಯಾದವುಗಳು

**30**. ಒಂದು ಅಪರಾಧಕ್ಕೆ ನೀಡುವ ಕುಮ್ಮಕ್ಕು

(A) ಯಾವಾಗಲೂ ಅಪರಾಧವಾಗಿದೆ

(B) ಅಪರಾಧವೇ ಅಲ್ಲ

(C) ಸಂದರ್ಭಕ್ಕನುಗುಣವಾಗಿ ಅಪರಾಧವಾಗಲೂಬಹುದು

(D) ಸಂದರ್ಭಕ್ಕೆ ಹೊಂದಿಕೊಂಡು ಅಪರಾಧವಾಗಿರಲೂಬಹುದು

**31**. ಕೊಲೆಗೆ ಸಮನಲ್ಲದ ದಂಡನೀಯ ನರಹತ್ಯೆ _______________ ನೊಂದಿಗೆ ಶಿಕ್ಷಾರ್ಹವಾಗಿದೆ.

(A) ಮರಣದಂಡನೆ

(B) ಜೀವಾವಧಿ ಸೆರೆವಾಸ

(C) ಜೀವಾವಧಿ ಸೆರೆವಾಸ ಅಥವಾ 10 ವರ್ಷ ಸೆರೆವಾಸ

(D) 10 ವರ್ಷ ಸೆರೆವಾಸ

**32**. ಭಾರತೀಯ ದಂಡ ಸಂಹಿತೆ ಎಂದಿನಿಂದ ಜಾರಿಗೆ ಬಂತು ?

(A) 6 ಅಕ್ಟೋಬರ್ 1860

(B) 1 ಸೆಪ್ಟೆಂಬರ್ 1872

(C) 1 ಜುಲೈ 1882

(D) 1 ಎಪ್ರಿಲ್ 1973

**33**. ಕೆಳಗಿನ ನ್ಯಾಯಾಧೀಶರಲ್ಲಿ ಯಾರನ್ನು ಹಸಿರು ನ್ಯಾಯಾಧೀಶ ಎನ್ನುತ್ತಾರೆ ?

(A) ನ್ಯಾಯಮೂರ್ತಿ ವೈ. ವಿ. ಚಂದ್ರಚೂಡ್

(B) ನ್ಯಾ॥ ಕುಲ್‌ದೀಪ್ ಸಿಂಗ್

(C) ನ್ಯಾ॥ ಎ. ಎನ್. ರೇ

(D) ನ್ಯಾ॥ ಇ. ಎಸ್. ವೆಂಕಟ್ರಾಮಯ್ಯ

**34**. ಪರಿಸರದ ರಕ್ಷಣೆ ಮತ್ತು ಸುಧಾರಣೆ ಹಾಗೂ ಕಾಡು ಮತ್ತು ವನ್ಯಜೀವಿ ರಕ್ಷಣೆ ರಾಜ್ಯದ ಕರ್ತವ್ಯವಾಗಿದೆ. ಸಂವಿಧಾನದ ಯಾವ ವಿಧಿ ಒಳಗೊಂಡಿದೆ ?

(A) ವಿಧಿ – 51 A(g)

(B) ವಿಧಿ – 39 (a)

(C) ವಿಧಿ – 48 A

(D) ವಿಧಿ – 31 (C)

**28.** Extortion is an intermediate between

(A) Cheating and criminal misappropriation

(B) Robbery and dacoity

(C) Theft and robbery

(D) Criminal breach of trust and criminal misappropriation

**29.** Under Section 361 of IPC the offence of kidnaping is

I) When someone takes or entices any minor

II) Minor means a girl under eighteen years of age and boy under sixteen years of age

III) To take away any person from his lawful guardianship if he is of unsound mind

IV) Minor means a girl below eighteen years of age and a boy below twenty one years of age

Give correct answer using codes.

**Codes :**

(A) I, II and IV are correct

(B) I and II are correct

(C) I, III and IV are correct

(D) I, II and III are correct

**30.** Abetment of an offence is

(A) always an offence

(B) never an offence

(C) may be an offence depending on the circumstances

(D) may not an offence depending on the circumstances

**31.** Culpable homicide not amounting to murder is punishable with

(A) death

(B) imprisonment for life

(C) imprisonment for life or imprisonment for 10 years

(D) imprisonment for 10 years

**32.** The Indian Penal Code came into effect from

(A) 6 October 1860

(B) 1 September 1872

(C) 1 July 1882

(D) 1 April 1973

**33.** Which of the following judges is known as green judge ?

(A) Justice Y. V. Chandrachud

(B) Justice Kuldip Singh

(C) Justice A. N. Ray

(D) Justice E. S. Venkatramaiah

**34.** In the Constitution duty of the State to protect and improvement of environment and safeguard the forest and wildlife is embodied in

(A) Article 51 A (g)

(B) Article 39 (a)

(C) Article 48 A

(D) Article 31 (C)

**35**. ‘ಅಂತರ್ ಪೀಳಿಗೆಯ ’ ತತ್ವವು ಏನನ್ನು ಕಲ್ಪಿಸುತ್ತದೆ / ಭಾವಿಸುತ್ತದೆ ?

(A) ಆಯ್ಕೆಗಳ ಸಂರಕ್ಷಣೆ

(B) ಗುಣಮಟ್ಟದ ಸಂರಕ್ಷಣೆ

(C) ಪ್ರವೇಶಾವಕಾಶ

(D) ಮೇಲಿನ ಎಲ್ಲವೂ

**36**. ಪರಿಸರ ರಕ್ಷಿಸಲು ಸರ್ವೋಚ್ಚ ನ್ಯಾಯಾಲಯ ರೂಪಿಸಿದ ತತ್ವ ಕೆಳಗಿನವುಗಳಲ್ಲಿ ಯಾವುದು ಅಲ್ಲ ?

(A) ಮುಂಜಾಗ್ರತೆಯ ತತ್ವ

(B) ಮಾಲಿನ್ಯ ಕೊಡುತ್ತದೆ (ಸಂದಾಯ ಮಾಡುತ್ತದೆ) ತತ್ವ

(C) ಸಾರ್ವಜನಿಕ ನ್ಯಾಸ (ಟ್ರಸ್ಟ್) ತತ್ವ

(D) ಸಾರ್ವಜನಿಕ ಧೋರಣೆ ತತ್ವ

**37**. **ದೃಢ ಹೇಳಿಕೆ (A)** : ಧ್ವನಿ ವರ್ಧಕದ ಸಹಾಯದಿಂದ ತನ್ನ ಭಾಷಣಗಳ ದನಿಯನ್ನು ಹೆಚ್ಚಿಸುವುದರ ಮೂಲಕ ಶಬ್ದ ಮಾಲಿನ್ಯ ಸೃಷ್ಟಿಸಲು ಮೂಲಭೂತ ಹಕ್ಕು ಇದೆ ಎಂದು ಯಾರೂ ಹಕ್ಕು ಸ್ಥಾಪನೆ ಮಾಡಲಾಗದು.

**ಸಮರ್ಥನೆ (R)** : ಒಬ್ಬನಿಗೆ ಭಾಷಣ ಮಾಡಲು ಹಕ್ಕು ಇದ್ದರೆ, ಇತರರಿಗೆ ಆ ಭಾಷಣ ಕೇಳುವ ಅಥವಾ ಕೇಳಲು ನಿರಾಕರಿಸುವ ಹಕ್ಕು ಇದೆ. ತನ್ನ ಮನೆಯೊಳಗೆ ಶಾಂತಿಯಿಂದ, ಆರಾಮವಾಗಿ ಮತ್ತು ನಿಶ್ಶಬ್ದ/ನಿರಾತಂಕವಾಗಿ ಜೀವಿಸಲು ಇಚ್ಛಿಸುವ ಯಾರೊಬ್ಬರಿಗೂ ಶಬ್ದವನ್ನು ತಡೆಯಲು ಮೂಲಭೂತ ಹಕ್ಕು ಇದೆ.

**ಸಂಕೇತಗಳು** :

(A) (A) ಸರಿ ಆದರೆ (R) ತಪ್ಪು

(B) (A) ತಪ್ಪು ಆದರೆ (R) ಸರಿ

(C) (A) ಮತ್ತು (R) ಎರಡೂ ಸರಿ ಆದರೆ (R), (A)ಯ ಸರಿಯಾದ ವಿವರಣೆ ಅಲ್ಲ

(D) (A) ಮತ್ತು (R) ಎರಡೂ ಸರಿ ಮತ್ತು (R), (A)ಯ ಉತ್ತಮ ವಿವರಣೆ ಆಗಿದೆ

**38**. ಯಾವುದೇ ವ್ಯಕ್ತಿ ಕ್ರಿಮಿನಲ್ ದೂರನ್ನು ದಾಖಲಿಸಲು ಕೇಂದ್ರ ಸರಕಾರಕ್ಕೆ ಜಾರಿಗೊಳಿಸಬೇಕಾಗಿರುವ ಪರಿಸರ (ರಕ್ಷಣೆ) ಅಧಿನಿಯಮ, 1986 ದಿಂದ ನೀಡುವ ನೋಟೀಸಿನ ಅವಧಿಯು

(A) 60 ದಿನಗಳಿಗಿಂತ ಕಡಿಮೆ ಇರಬಾರದು

(B) 45 ದಿನಗಳಿಗಿಂತ ಕಡಿಮೆ ಇರಬಾರದು

(C) 30 ದಿನಗಳಿಗಿಂತ ಕಡಿಮೆ ಇರಬಾರದು

(D) 90 ದಿನಗಳಿಗಿಂತ ಕಡಿಮೆ ಇರಬಾರದು

**39**. ಸುಪ್ರಿಂಕೋರ್ಟ್‌ನಿಂದ ಅರಣ್ಯ ರಕ್ಷಣೆಯಲ್ಲಿ ‘‘ಹೈ ವಾಟರ್ ಮಾರ್ಕ್’’ ಪ್ರಕರಣ ಎಂದು ಕೆಳಗಿನ ಯಾವುದನ್ನು ಪರಿಗಣಿಸಲಾಗಿದೆ ?

(A) ಸಾಲೆಭ್ಯಾ ಮುಲ್ಲಾ ಮೊಹಮ್ಮದಾಲಿ V ಗುಜರಾತ್ ಸರಕಾರ

(B) ಟಿ. ಎನ್. ಗೋದಾವರ್ಮನ್ ತಿರುಮಲ್‌ಪಾದ್ V ಭಾರತದ ಯೂನಿಯನ್

(C) ನರ್ಮದಾ ಬಚಾವೊ ಆಂದೋಲನ್ V ಭಾರತದ ಯೂನಿಯನ್

(D) ಸಮತಾ V ಭಾರತದ ಯೂನಿಯನ್

**40**. ‘‘ಅಂತರ್‌ರಾಷ್ಟ್ರೀಯ ಕಾನೂನು ನ್ಯಾಯಶಾಸ್ತ್ರದ ಕಣ್ಮರೆಯಾಗುತ್ತಿರುವ ಬಿಂದುವಾಗಿದೆ’’ ಎಂದು ಯಾರು ಹೇಳಿದರು ?

(A) ಸಾಲ್‌ಮಾಂಡ್

(B) ಆಸ್ಟಿನ್

(C) ಹೋಲ್ಲೆಂಡ್

(D) ಸ್ಟಾರ್ಕ್

**35.** Find the correct answer. The principle intergenerational equity envisages

(A) Conservation of options

(B) Conservation of quality

(C) Conservation of access

(D) All the above

**36.** Which of the following is not a principle formulated by the Supreme Court to protect environment ?

(A) The precautionary principle

(B) The polluter pays principle

(C) The doctrine of public trust

(D) The principle of public policy

**37.** **Assertion (A)** : Nobody can claim a fundamental right to create noise-pollution by amplifying sound of his speech with the help of loud speaker.

**Reason (R)** : While one has a right to speech, others have the right to listen or decline to listen. Any one who wishes to live in peace, comfort and quiet within his house has a fundamental right to prevent noise.

**Codes :**

(A) (A) is true but (R) is false

(B) (A) is false but (R) is true

(C) Both (A) and (R) are true but (R) is not the correct explanation of (A)

(D) Both (A) and (R) are true and (R) is the good explanation of (A)

**38.** Period of notice prescribed by the Environment (protection) Act, 1986 required to be served upon Central Government for filing a criminal complaint by any person is

(A) Not less than 60 days

(B) Not less than 45 days

(C) Not less than 30 days

(D) Not less than 90 days

**39.** Which of the following is considered as ‘high water-mark’ case in forest protection by the Supreme Court ?

(A) Salebhai Mulla Mohamadali V State of Gujarath

(B) T.N.Godavarman Tirumalpad V Union of India

(C) Narmada Bachao Andolan V Union of India

(D) Samatha V Union of India

**40.** “International Law is vanishing point of jurisprudence”. Who said that ?

(A) Salmond

(B) Austin

(C) Holland

(D) Starke

**41.** ಕೆಳಗಿನ ಯಾವ ಮಾನ್ಯತೆಯು ಅಂತಿಮ/ಶಾಶ್ವತವಾಗಿದೆ ?

(A) ಡಿ ಜೂರ್

(B) ಡಿ ಫ್ಯಾಕ್ಟೊ

(C) ಅವಕ್ಷೇಪ ಮಾನ್ಯತೆ

(D) (A) ಮತ್ತು (C) ಎರಡು ಕೂಡ

**42.** ಶಾಂತಿ ಮತ್ತು ಭದ್ರತೆ ನಿರ್ವಹಣೆಗಾಗಿ ಪ್ರಾದೇಶಿಕ ಜೋಡಣೆಗಳು/ವ್ಯವಸ್ಥೆಗಳು ಯಾವುದೇ ಕಾನೂನು ಪಾಲನೆ ಒತ್ತಾಯಕ್ಕೆ ಕ್ರಮ ತೆಗೆದುಕೊಳ್ಳಲು ಭದ್ರತಾ ಮಂಡಳಿಗೆ ತಿಳಿಸುವ ಅನಿವಾರ್ಯತೆ ವಿಶ್ವಸಂಸ್ಥೆ ಚಾರ್ಟರ್‌ನ ಕೆಳಗಿನ ಯಾವ ವಿಧಿಯ ಅಡಿಯಲ್ಲಿ ಇದೆ ?

(A) ವಿಧಿ 51

(B) ವಿಧಿ 54

(C) ವಿಧಿ 107

(D) ವಿಧಿ 108

**43.** ವಿಶ್ವಸಂಸ್ಥೆಯ ಸಾಮಾನ್ಯ ಸಭೆಗೆ ಪ್ರತಿಯೊಂದು ಸದಸ್ಯರಾಷ್ಟ್ರ ಎಷ್ಟು ಪ್ರತಿನಿಧಿಗಳನ್ನು ಕಳುಹಿಸಲು ಅನುಮತಿ ಇದೆ ?

(A) ಇಬ್ಬರು ಪ್ರತಿನಿಧಿಗಳು

(B) ಮೂರು ಪ್ರತಿನಿಧಿಗಳು

(C) ನಾಲ್ಕು ಪ್ರತಿನಿಧಿಗಳು

(D) ಐದು ಪ್ರತಿನಿಧಿಗಳು

**44.** ICJ __________ ಒಳಗೊಂಡಿದೆ.

(A) 15 ನ್ಯಾಯಾಧೀಶರು

(B) 12 ನ್ಯಾಯಾಧೀಶರು

(C) 14 ನ್ಯಾಯಾಧೀಶರು

(D) 10 ನ್ಯಾಯಾಧೀಶರು

**45.** ಪಟ್ಟಿ – I ನ್ನು ಪಟ್ಟಿ – II ರೊಂದಿಗೆ ಹೊಂದಿಸಿರಿ. ಪಟ್ಟಿಗಳ ಕೆಳಗೆ ಕೊಟ್ಟ ಸಂಕೇತಗಳನ್ನು ಉಪಯೋಗಿಸಿ ಸರಿಯಾದ ಉತ್ತರ ಆಯ್ಕೆ ಮಾಡಿರಿ .

| **ಪಟ್ಟಿ – I** | **ಪಟ್ಟಿ – II** |
|---|---|
| a) ಗಾಯಗಳ ನಷ್ಟ ಭರ್ತಿ ಪ್ರಕರಣ | I) ಬಲಪ್ರಯೋಗ ನಿಷೇಧ ಮತ್ತು ಸಾಮೂಹಿಕ ರಕ್ಷಣೆಯ ಫಲ |
| b) ನೋಟ್ಟೆ ಭೋಮ್ ಪ್ರಕರಣ | II) ಒಪ್ಪಂದಗಳ ಮೀಸಲು |
| c) ಜನಹತ್ಯೆ ಸಂಪ್ರದಾಯ ಪ್ರಕರಣ | III) UNO ವಿನ ಕಾನೂನುಬದ್ಧ ವ್ಯಕ್ತಿತ್ವ |
| d) ನಿಕರಗುವಾ ಪ್ರಕರಣ | IV) ವಾರಸುದಾರನ ರಾಷ್ಟ್ರೀಯತೆಯ ವಿವಾದಾಂಶ |

**ಸಂಕೇತಗಳು :**

| | a | b | c | d |
|---|---|---|---|---|
| (A) | IV | III | I | II |
| (B) | III | IV | I | II |
| (C) | III | IV | II | I |
| (D) | IV | III | II | I |

**46.** ವಿಚ್ಛೇದನಕ್ಕೆ ಸಂಬಂಧಿಸಿದ ಕೆಳಗಿನ ಯಾವ ಸಿದ್ಧಾಂತವು ಹಿಂದೂ ವಿವಾಹ ಅಧಿನಿಯಮ, 1955ರ ಅಡಿಯಲ್ಲಿ ಇನ್ನೂ ಕೂಡ ಮಾನ್ಯತೆ ಪಡೆದಿಲ್ಲ ?

(A) ದೋಷ ಸಿದ್ಧಾಂತ

(B) ಪರಸ್ಪರ ಒಪ್ಪಿಗೆ ಸಿದ್ಧಾಂತ

(C) ನಿಂತುಹೋಗುವ/ಭಂಗವಾಗುವ ಸಿದ್ಧಾಂತ

(D) ಪರಿಹಾರವಿಲ್ಲದ ನಿಂತುಹೋಗುವ ಸಿದ್ಧಾಂತ

**47.** ಹಿಂದೂ ವಿವಾಹ ಅಧಿನಿಯಮದ ಪ್ರಕಾರ ತಮ್ಮ ವಿವಾಹವನ್ನು ಯಾರು ಶಾಸ್ತ್ರೋಕ್ತವಾಗಿ ನಡೆಸಲು ಬರುವುದಿಲ್ಲ ?

(A) ಹಿಂದೂ ಮತ್ತು ಸಿಖ್

(B) ಹಿಂದೂ ಮತ್ತು ಮುಸ್ಲಿಂ

(C) ಬೌದ್ಧ ಮತ್ತು ಜೈನ್

(D) ಬೌದ್ಧ ಮತ್ತು ಸಿಖ್

**41.** Which of the following recognition is final/ permanent ?

(A) De jure

(B) De facto

(C) Precipitate recognition

(D) Both (A) and (C)

**42.** Under which of the following Article of the U.N.Charter there is an obligation to inform the security council if the regional arrangements take any enforcement action for maintenance of peace and security ?

(A) Article 51

(B) Article 54

(C) Article 107

(D) Article 108

**43.** Each member in the General Assembly of U.N. is permitted send

(A) Two representatives

(B) Three representatives

(C) Four representatives

(D) Five representatives

**44.** ICJ consists of

(A) 15 Judges

(B) 12 Judges

(C) 14 Judges

(D) 10 Judges

**45.** Match List – I with List – II and select the correct answer using codes given below the lists :

| | **List – I** | | **List –II** |
|---|---|---|---|
| a) | Reparation of Injuries Case | I) | Prohibition of use of force and right of collective self-defence |
| b) | Nottebohm Case | II) | Reservation of treaties |
| c) | Genocide Convention Case | III) | Legal personality of the UNO |
| d) | Nicaragua Case | IV) | Issue of nationality of the claimant |

**Codes :**

| | **a** | **b** | **c** | **d** |
|---|---|---|---|---|
| (A) | IV | III | I | II |
| (B) | III | IV | I | II |
| (C) | III | IV | II | I |
| (D) | IV | III | II | I |

**46.** Which of the following theories of divorce has not yet seen recognised under the Hindu Marriage Act, 1955 ?

(A) Fault theory

(B) Mutual consent theory

(C) Break down theory

(D) Irretrievable breakdown theory

**47.** Who can not solmanise their marriage under the Hindu Marriage Act ?

(A) Hindu and Sikh

(B) Hindu and Muslim

(C) Buddh and Jain

(D) Buddh and Sikh

**48.** ಬದುಕಿರುವ ಪತ್ನಿ ಇರುವ ಹಿಂದೂ ಒಂದು ಮಗುವನ್ನು ದತ್ತು ತೆಗೆದುಕೊಂಡರೆ, ಆ ಪತ್ನಿಯನ್ನು ಏನೆಂದು ಕರೆಯುತ್ತಾರೆ ?

(A) ದತ್ತು ಸಂಬಂಧದ ತಾಯಿ

(B) ಸಹಜ ತಾಯಿ

(C) ಮಲತಾಯಿ

(D) (A) ಮತ್ತು (B) ಎರಡು ಕೂಡ

**49.** ಒಬ್ಬ ಹಿಂದೂ ಪತಿಗೆ ತನ್ನ ಪತ್ನಿಯನ್ನು ಸಲಹುತ್ತ ಜೀವನೋಪಾಯ ಕಲ್ಪಿಸುವ ಅನಿವಾರ್ಯತೆಯು

(A) ಆಸ್ತಿಯೊಂದಿಗೆ ಸಮವ್ಯಾಪಕವಾದುದು

(B) ವೈಯಕ್ತಿಕ ಅನಿವಾರ್ಯತೆ ಅಲ್ಲ

(C) ವೈಯಕ್ತಿಕ ಅನಿವಾರ್ಯತೆಯಾಗಿದೆ

(D) (A) ಮತ್ತು (B) ಎರಡು ಕೂಡ

**50.** ತಂದೆಯ ಜೀವಿತದ ಅವಧಿಯಲ್ಲಿ ಹಿಂದೂ ತಾಯಿಯು ರಕ್ಷಕಿ ಕೂಡ ಆಗಬಹುದು ಎಂದು ಸುಪ್ರಿಂಕೋರ್ಟ್ ಕೆಳಗಿನ ಯಾವ ಪ್ರಕರಣದಲ್ಲಿ ಘೋಷಿಸಿದೆ ?

(A) ಗೀತಾ ಹರಿಹರನ್ V ಭಾರತದ ಯೂನಿಯನ್

(B) ಸರಿತಾ V ವೆಂಕಟ ಸುಬ್ಬಯ್ಯ

(C) ಸರಳಾ ಮುದ್ಗಿಲ್ V ಭಾರತದ ಯೂನಿಯನ್

(D) ಲಿಲ್ಲಿ ಥಾಮಸ್ V ಭಾರತದ ಯೂನಿಯನ್

**51.** ಮುಸ್ಲಿಂ ಪತ್ನಿಗೆ ವಿಚ್ಛೇದನಕ್ಕೆ ಮುಸ್ಲಿಂ ಮದುವೆಯ ವಿಚ್ಛೇದ ಅಧಿನಿಯಮ, 1939ರ ಯಾವ ಪರಿಚ್ಛೇದವು ಆಧಾರ ಒದಗಿಸುತ್ತದೆ ?

(A) ಪರಿಚ್ಛೇದ 3

(B) ಪರಿಚ್ಛೇದ 4

(C) ಪರಿಚ್ಛೇದ 5

(D) ಪರಿಚ್ಛೇದ 2

**52.** ಒಂದು ಮುಬರ್‍ರಾ ವಿಚ್ಛೇದನದಲ್ಲಿ

(A) ವಿರೋಧ / ವಿಮುಖತೆಯು ಪತಿಯ ಕಡೆ ಇರುತ್ತದೆ

(B) ವಿರೋಧ / ವಿಮುಖತೆಯು ಪತ್ನಿಯ ಕಡೆ ಇರುತ್ತದೆ

(C) ವಿರೋಧ / ವಿಮುಖತೆಯು ಪರಸ್ಪರವಾಗಿದ್ದು ಇಬ್ಬರ ಕಡೆಯೂ ಇರುತ್ತದೆ

(D) (A) ಅಥವಾ (B)

**53.** ಸಂವಿಧಾನದಲ್ಲಿ ಏಕರೂಪದ ನಾಗರಿಕ ಸಂಹಿತೆ ಏನಾಗಿ ಸೇರಿಸಲ್ಪಟ್ಟಿದೆ ?

(A) ಮೂಲಭೂತ ಹಕ್ಕು

(B) ಸಂವಿಧಾನಾತ್ಮಕ ಹಕ್ಕು

(C) ಮೂಲಭೂತ ಕರ್ತವ್ಯ

(D) ನಿರ್ದೇಶಕ ತತ್ವ

**54.** ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿರಿ ( ಯೋಚಿಸಿರಿ ) :

1) ಮಾನವ ಹಕ್ಕುಗಳ ಸಾರ್ವತ್ರಿಕ ಘೋಷಣೆಯು ಮಾನವ ಹಕ್ಕುಗಳ ಮ್ಯಾಗ್ನಕಾರ್ಟ ಆಗಿದೆ.

2) ನಾಗರಿಕ ಮತ್ತು ರಾಜಕೀಯ ಹಕ್ಕುಗಳ ಮೇಲಿನ ಅಂತರ್‌ರಾಷ್ಟ್ರೀಯ ಒಡಂಬಡಿಕೆಯ ಶಿಷ್ಟಾಚಾರ ವಿಭಾಗಕ್ಕೆ ಭಾರತವು ಒಂದು ಪಾರ್ಟಿ ಆಗಿದೆ. (ಸಹಭಾಗಿ ಆಗಿದೆ)

3) ಭಾರತವು 1984ರ ಚಿತ್ರಹಿಂಸೆ ವಿರುದ್ಧ ಒಪ್ಪಂದಕ್ಕೆ ಸಹಿ ಹಾಕಿದೆ ಮತ್ತು ಅನುಮೋದಿಸಿದೆ.

ಮೇಲಿನ ಹೇಳಿಕೆಗಳಲ್ಲಿ ಯಾವುದು ಸರಿ ?

(A) 1 ಮತ್ತು 2 ಸರಿ

(B) 2 ಮತ್ತು 3 ಸರಿ

(C) 1 ಮಾತ್ರ ಸರಿ

(D) 2 ಮಾತ್ರ ಸರಿ

**55.** UNO ಎಂದು ಸ್ಥಾಪನೆಗೊಂಡಿತು ?

(A) 1947 (B) 1956

(C) 1945 (D) 1946

**48.** Where a Hindu who has a wife living adopts a child, the sard wife is called

(A) the adoptive mother

(B) the natural mother

(C) the step mother

(D) Both (A) and (B)

**49.** The obligation of Hindu husband to maintain his wife is

(A) Coextensive with property

(B) No personal obligation

(C) Personal obligation

(D) Both (A) and (B)

**50.** In which of the following cases the Supreme Court has declared that a Hindu mother can also be a Guardian during the life-time of the father ?

(A) Geetha Hariharan V Union of India

(B) Saritha V Venkata Subhaiah

(C) Sarala Mudgil V Union of India

(D) Lilly Thomas V Union of India

**51.** Which Section Dissolution of Muslim Marriage Act, 1939 provide grounds for divorce to a Muslim wife ?

(A) Section 3

(B) Section 4

(C) Section 5

(D) Section 2

**52.** In a Mubarra divorce

(A) aversion is on the side of the husband

(B) aversion is on the side of the wife

(C) aversion is mutual and on both the sides

(D) either (A) or (B)

**53.** In the Constitution Uniform Civil Code is included as

(A) Fundamental Right

(B) Constitutional Right

(C) Fundamental duty

(D) Directive Principle

**54.** Consider the following statements :

1) Universal declaration of Human Rights is the Magna Carta of Human Rights.

2) India is a party to protocol of International Covenant on Civil and Political Rights.

3) India has signed and ratified the 1984 Anti-Tortune convention.

Which of the above statements are correct ?

(A) 1 and 2 are correct

(B) 2 and 3 are correct

(C) 1 above is correct

(D) 2 above is correct

**55.** UNO is established in

(A) 1947 (B) 1956

(C) 1945 (D) 1946

**56**. UDHRನ ಅತ್ಯಂತ ಮುಖ್ಯವಾದ ಹಕ್ಕುಗಳನ್ನು ಯಾವುದರಲ್ಲಿ ಸೇರಿಸಲಾಗಿದೆ ?

(A) ಸಂವಿಧಾನದ ಭಾಗ III ಮತ್ತು IV

(B) ಸಂವಿಧಾನದ ಭಾಗ I ಮತ್ತು V

(C) ಸಂವಿಧಾನದ ಭಾಗ VII

(D) ಸಂವಿಧಾನದ ವಿಧಿ 308 ರಿಂದ 311

**57**. ಮಾನವ ಹಕ್ಕುಗಳ ರಕ್ಷಣೆ ಅಧಿನಿಯಮ, 1993ರ ಪರಿಚ್ಛೇದ 2(d) ಮಾನವ ಹಕ್ಕುಗಳನ್ನು ಏನೆಂದು ವ್ಯಾಖ್ಯಾನಿಸಿದೆ ?

(A) ಭಾರತದ ಸಂವಿಧಾನ ಖಾತರಿ ಪಡಿಸಿದ ವ್ಯಕ್ತಿಯ ಜೀವ, ಸ್ವಾತಂತ್ರ್ಯ , ಸಮಾನತೆ ಮತ್ತು ಗೌರವಕ್ಕೆ ಸಂಬಂಧಪಟ್ಟ ಹಕ್ಕುಗಳು

(B) ವ್ಯಕ್ತಿಯ ಜೀವ, ಸ್ವಾತಂತ್ರ್ಯ, ಸಮಾನತೆ ಮತ್ತು ಗೌರವಕ್ಕೆ ಸಂಬಂಧಪಟ್ಟ, ಅಂತರ್‌ರಾಷ್ಟ್ರೀಯ ಒಪ್ಪಂದಗಳಲ್ಲಿ ಸ್ಪಷ್ಟವಾಗಿ ವ್ಯಕ್ತಪಡಿಸಿದ ಮತ್ತು ಭಾರತದಲ್ಲಿನ ನ್ಯಾಯಾಲಯಗಳಿಂದ ಜಾರಿಮಾಡಲ್ಪಟ್ಟ ಹಕ್ಕುಗಳು

(C) (A) ಮತ್ತು (B) ಎರಡು ಕೂಡ

(D) (B) ಮಾತ್ರ

**58**. ಅವು ಕಾಣಿಸಿಕೊಂಡ ಕ್ರಮದಲ್ಲಿ ಈ ಕೆಳಗಿನವುಗಳನ್ನು ಜೋಡಿಸಿ.

I) ನಿರಾಶ್ರಿತರ ಸ್ಥಾನಕ್ಕೆ ಸಂಬಂಧಿಸಿದ ಸಮ್ಮೇಳನ

II) ಮಾನವ ಹಕ್ಕುಗಳ ಮೇಲಿನ ಯುರೋಪ್‌ನ ಸಮ್ಮೇಳನ

III) ಜನಹತ್ಯೆ ತಡೆಯುವುದರ ಮೇಲಿನ ಸಮ್ಮೇಳನ

IV) ಪ್ಯಾರಿಸ್‌ನ ಒಪ್ಪಂದ

**ಸಂಕೇತಗಳು :**

(A) I, IV, III, II (B) IV, III, II, I

(C) III, II, IV, I (D) II, IV, I, III

**59**. **ದೃಢ ಹೇಳಿಕೆ (A)** : ಮಾನವ ಹಕ್ಕುಗಳ ಗೌರವಕ್ಕೆ ಸಹಾಯ ಮಾಡುವುದು ಮತ್ತು ಉತ್ತೇಜನ ನೀಡುವುದು ವಿಶ್ವಸಂಸ್ಥೆಯ ಉದ್ದೇಶಗಳಲ್ಲಿ ಒಂದು.

**ಸಮರ್ಥನೆ (R)** : ಸದಸ್ಯ ರಾಷ್ಟ್ರಗಳಿಂದ ವೃದ್ಧಿಸಲ್ಪಟ್ಟ ಮಾನವ ಹಕ್ಕುಗಳನ್ನು ವಿಶ್ವಸಂಸ್ಥೆಯ ಚಾರ್ಟರ್ ಕಲ್ಪನೆಯಾಗಿ ಮಾಡಿಕೊಂಡಿದೆ, ಸಮರ್ಥಿಸಿದೆ ಮತ್ತು ಓದಿ ತಿಳಿದುಕೊಂಡಿದೆ.

**ಸಂಕೇತಗಳು :**

(A) (A) ಮತ್ತು (R) ಎರಡೂ ಕೂಡ ಸರಿ ಮತ್ತು (R), (A)ಯ ಉತ್ತಮ ವಿವರಣೆ ಆಗಿದೆ

(B) (A) ಮತ್ತು (R) ಎರಡೂ ಕೂಡ ಸರಿ ಆದರೆ (R), (A)ಯ ಸರಿಯಾದ ವಿವರಣೆ ಅಲ್ಲ

(C) (A) ಸರಿ ಆದರೆ (R) ತಪ್ಪು

(D) (A) ತಪ್ಪು ಆದರೆ (R) ಸರಿ

**60**. UDHR ಯಾವುದಕ್ಕೆ ಅವಕಾಶ ಕೊಟ್ಟಿದೆ ?

(A) ನಾಗರಿಕ ಹಕ್ಕುಗಳು

(B) ನಾಗರಿಕ ಮತ್ತು ರಾಜಕೀಯ ಹಕ್ಕುಗಳು

(C) ನಾಗರಿಕ, ರಾಜಕೀಯ ಮತ್ತು ಆರ್ಥಿಕ ಹಕ್ಕುಗಳು

(D) ನಾಗರಿಕ, ರಾಜಕೀಯ ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಹಕ್ಕುಗಳು

**61**. ''ಪಿಜಿಯನ್ ಹೋಲ್'' ಸಿದ್ಧಾಂತದ ಪ್ರತಿಪಾದಕ ಯಾರು ?

(A) ಸಾಲ್‌ಮಾಂಡ್ (B) ಆಸ್ಟಿನ್

(C) ವಿನ್‌ಫೀಲ್ಡ್ (D) ಕ್ಲರ್ಕ್

**62**. ಅಪಚಾರ/ಅಪಕೃತ್ಯವು ಯಾವುದರ ಉಲ್ಲಂಘನೆಯಾಗಿದೆ ?

(A) ರೈಟ್ ಇನ್ ಪರ್ಸೋನಮ್

(B) ರೈಟ್ ಇನ್ ರೆಮ್

(C) ರೈಟ್ ಇನ್ ಪರ್ಸೋನಮ್ ಮತ್ತು ರೈಟ್ ಇನ್ ರೆಮ್ ಎರಡು ಕೂಡ

(D) ರೈಟ್ ಪರ್ಸೋನಮ್ ಮತ್ತು ರೈಟ್ ಇನ್ ರೆಮ್ ಎರಡೂ ಅಲ್ಲ

**63**. ಸ್ವತಂತ್ರ ವೈಯಕ್ತಿಕ ಅಪರಾಧದ ಬಾಧ್ಯತೆಯು

(A) ಜಂಟಿ ಮಾತ್ರ

(B) ಬೇರೆ ಬೇರೆಯಾದದ್ದು ಮಾತ್ರ

(C) ಜಂಟಿ ಮತ್ತು ಬೇರೆ ಬೇರೆಯಾದದ್ದು

(D) ಜಂಟಿಯೂ ಅಲ್ಲ ಬೇರೆ ಬೇರೆಯಾದದ್ದೂ ಅಲ್ಲ

**56.** Most important rights of the UDHR are incorporated in

(A) Part III and IV of the Constitution

(B) Part I and V of the Constitution

(C) Part VII of the Constitution

(D) Articles 308 to 311 of the Constitution

**57.** Section 2 (d) of the Protection of Human Rights Act, 1993 defines human rights as

(A) Rights relating to life, liberty, equality and dignity of the individual guarantied by the Constitution of India

(B) Rights relating life, liberty, equality and dignity of the individual embodied in the International Covenants and Enforceable by courts in India

(C) Both (A) and (B)

(D) Only (B)

**58.** Arrange the following in order in which they appeared.

I) Convention relating to status of refugees

II) European convention on Human Rights

III) Convention on prevention of Genocide

IV) The Pact of Paris

**Codes :**

(A) I. IV, III, II  (B) IV, III, II, I

(C) III, II, IV, I  (D) II, IV, I, III

**59.** **Assertion (A)** : To promote and encourage respect for human rights is one of the purposes of the United Nations.

**Reason (R)** : The charter of United Nations conceptualises, substantiates and spells out human rights which are to be promoted by the member States.

**Codes :**

(A) Both (A) and (R) are true and (R) is the good explanation of (A).

(B) Both (A) and (R) are true but (R) is not correct explanation of (A).

(C) (A) is true but (R) is false.

(D) (A) is false but (R) is true.

**60.** UDHR provides

(A) Civil Rights

(B) Civil and Political Rights

(C) Civil, Political and Economic Rights

(D) Civil, Political, Social, Economic and Cultural Rights

**61.** The profounder of 'Pigeon hole' theory is

(A) Salmond  (B) Austin

(C) Winfield  (D) Clerk

**62.** Tort is a violation of

(A) right in personam

(B) a right in rem

(C) both right in personam and right in rem

(D) neither right in personam nor a right in rem

**63.** The liability of independent tort feasors is

(A) Joint only

(B) Several only

(C) Joint and saveral

(D) Neither joint nor several

**64.** ನಿರ್ಲಕ್ಷ್ಯದ ವೈಯಕ್ತಿಕ ಅಪರಾಧದಲ್ಲಿ ಅಗತ್ಯವಾದ ಎಚ್ಚರಿಕೆಯ ಪ್ರಮಾಣಕವು

(A) ತಜ್ಞನ ಕೌಶಲ್ಯ ಮತ್ತು ಜಾಗರೂಕತೆ

(B) ಬುದ್ಧಿವಂತ ಮತ್ತು ಅರ್ಹತೆ ಪಡೆದ ವ್ಯಕ್ತಿಯ ಕೌಶಲ್ಯ ಮತ್ತು ಜಾಗರೂಕತೆ

(C) ಯುಕ್ತ ಮತ್ತು ವಿವೇಕವುಳ್ಳ ವ್ಯಕ್ತಿಯ ದೂರ ದೃಷ್ಟಿ

(D) ಸಂದರ್ಭವನ್ನು ಹೊಂದಿಕೊಂಡು

**65.** ''ಕಟ್ಟುನಿಟ್ಟಾದ ಬಾಧ್ಯತೆ'' ನಿಯಮವು

(A) ಯಾವುದೇ ರಕ್ಷಣೆ (ಪ್ರತಿವಾದ) ರಹಿತವಾದುದು

(B) ಪ್ರತಿವಾದವಾಗಿ ಇರುವ ಸಹಾಯಕವಾದ ಅಜಾಗರೂಕತೆ

(C) ಪ್ರತಿವಾದ (ರಕ್ಷಣೆ) ಯಾಗಿ ಇರುವ ವಿಸ್‌ಮೇಜರ್

(D) (B) ಮತ್ತು (C) ಎರಡು ಕೂಡ

**66.** ಪಟ್ಟಿ – I ನ್ನು ಪಟ್ಟಿ – II ರೊಂದಿಗೆ ಹೊಂದಿಸಿರಿ ಮತ್ತು ಕೆಳಗೆ ಕೊಟ್ಟಿರುವ ಸಂಕೇತ ಉಪಯೋಗಿಸಿ ಸರಿಯಾದ ಉತ್ತರ ಆಯ್ಕೆ ಮಾಡಿರಿ.

| **ಪಟ್ಟಿ – I** | **ಪಟ್ಟಿ – II** |
|---|---|
| I) ಡ್ಯಾಮ್ನಮ್ ಸೈನ್ ಇಂಜುರಿಯಾ | a) ಆಶ್‌ಬಿ V ವೈಟ್ |
| II) ನಿಚ್ಚಳ ಬಾಧ್ಯತೆ | b) ಗ್ಲೌಸೆಸ್ಟರ್ ಗ್ರಾಮರ್ ಶಾಲೆ |
| III) ಇಂಜುರಿಯಾ ಸೈನ್ ಡ್ಯಾಮ್ನಮ್ | c) ಸ್ಟ್ಯಾನ್ಲಿ V ಪೋವೆಲ್ |
| IV) ತಪ್ಪಿಸಲಾಗದ ಅಪಘಾತ | d) ರೈಲ್ಯಾಂಡ್ V ಫ್ಲೆಚರ್ |

**ಸಂಕೇತಗಳು :**

| | I | II | III | IV |
|---|---|---|---|---|
| (A) | b | d | a | c |
| (B) | a | c | d | b |
| (C) | c | a | b | d |
| (D) | d | b | c | a |

**67.** ಯಾವ ಮಟ್ಟದಲ್ಲಿ ಗ್ರಾಹಕ ರಕ್ಷಣಾ ಅಧಿನಿಯಮ, 1986 ಅನ್ಯಾಯದ ಸರಿಪಡಿಸುಕೆಯ ಕಾರ್ಯರೀತಿಗೆ ಅವಕಾಶ ನೀಡುತ್ತದೆ ?

(A) ರಾಷ್ಟ್ರೀಯ ಮತ್ತು ರಾಜ್ಯಮಟ್ಟದಲ್ಲಿ

(B) ರಾಷ್ಟ್ರೀಯ, ರಾಜ್ಯ ಮತ್ತು ತಾಲೂಕುಮಟ್ಟದಲ್ಲಿ

(C) ಜಿಲ್ಲಾ, ರಾಜ್ಯ ಮತ್ತು ರಾಷ್ಟ್ರಮಟ್ಟದಲ್ಲಿ

(D) ತಾಲೂಕು, ಜಿಲ್ಲೆ, ರಾಜ್ಯ ಮತ್ತು ರಾಷ್ಟ್ರೀಯಮಟ್ಟದಲ್ಲಿ

**68.** ಪಾಲುಗಾರಿಕೆಗೆ ಯಾವುದು ಅಗತ್ಯ ?

I) ಒಂದು ಲಿಖಿತ ಒಪ್ಪಂದ

II) ಮೌಖಿಕ ಒಪ್ಪಂದ

III) ಪಾಲುಗಾರರ ನಡತೆಯಿಂದ ನಿರ್ಣಯಿಸಬಹುದಾದ್ದು

**ಸಂಕೇತಗಳು :** ಮೇಲಿನವುಗಳಲ್ಲಿ ಯಾವುದು/ಯಾವುವು ಸರಿ ?

(A) I ಮಾತ್ರ

(B) II ಮಾತ್ರ

(C) III ಮಾತ್ರ

(D) I, II ಮತ್ತು III

**69.** ಪಾಲುದಾರನ ದೃಗ್ಗೋಚರ ಅಧಿಕಾರದ ವ್ಯಾಪ್ತಿಯು

(A) ಸೂಚಿತ ಅಧಿಕಾರಕ್ಕೆ ಸಮನಾದುದು

(B) ಸೂಚಿತ ಅಧಿಕಾರಕ್ಕಿಂತ ವಿಶಾಲವಾದುದು

(C) ಸೂಚಿತ ಅಧಿಕಾರಕ್ಕಿಂತ ಸಂಕುಚಿತವಾದುದು

(D) (A) ಅಥವಾ (C)

**70.** ಒಂದು ಸರಕು ಹುಂಡಿಯು

(A) ವಿನಿಮಯ ಪತ್ರದಂತಹ ವರ್ಗಾವಣೀಯ ಲಿಖಿತ

(B) ಭರವಸೆ ಪತ್ರದಂತಹ ವರ್ಗಾವಣೀಯ ಲಿಖಿತ

(C) (A) ಅಥವಾ (B) ಎರಡರಲ್ಲೊಂದು

(D) (A) ಯೂ ಅಲ್ಲ (B) ಯೂ ಅಲ್ಲ

**64.** The 'standard of care' required in tort of negligence is

(A) of skill and care of an expert

(B) of skill and care of an intelligent and qualified person

(C) of foresight of a reasonable and prudent man

(D) depending upon the circumstances

**65.** The rule of 'strict liability'

(A) is without any defence

(B) has contribution negligence as a defence

(C) has vis major as a defence

(D) both (B) and (C)

**66.** Match List – I with List – II and select the correct answer using the codes given below :

| | **List – I** | | **List – II** |
|---|---|---|---|
| I) | Damnum sine injuria | a) | Ashby V White |
| II) | Absolute liability | b) | Gloucester Grammer School |
| III) | Injuria sine damnum | c) | Stanely V Powel |
| IV) | Inevitable accident | d) | Ryland V Fletcher |

**Codes :**

| | **I** | **II** | **III** | **IV** |
|---|---|---|---|---|
| (A) | b | d | a | c |
| (B) | a | c | d | b |
| (C) | c | a | b | d |
| (D) | d | b | c | a |

**67.** The Consumer Protection Act, 1986 provides for redressal mechanism at

(A) National and State level

(B) National, State and Taluk level

(C) District, State and National level

(D) Taluk, District, State and National level

**68.** Partnership requires

I) A written agreement

II) Oral agreement

III) Could be informed from the conduct of the parties

Which of the above is /are correct ?

**Codes :**

(A) I only

(B) II only

(C) III only

(D) I, II and III

**69.** The scope of the apparent authority of a partner is

(A) The same as implieded authority

(B) Wider than the implied authority

(C) Narrover than the implied authority

(D) Either (A) or (C)

**70.** A bill of lading is

(A) a negotiable instrument like bill of exchange

(B) negotiable instrument like a promissory note

(C) either (A) or (B)

(D) neither (A) nor (B)

**71**. ಸರಕುಗಳ ಮಾರಾಟ ಅಧಿನಿಯಮ, 1930ರಲ್ಲಿ 'ಆಸ್ತಿ' (ಪ್ರೋಪರ್ಟಿ) ಶಬ್ದದ ಅರ್ಥ

(A) ಮಾರಾಟ ಮಾಡುವವ ಅಥವಾ ವರ್ಗಾಯಿಸುವವ

(B) ಕೊಳ್ಳುವವ ಅಥವಾ ಖರೀದಿಸುವವ

(C) ಸರಕುಗಳು ಅಥವಾ ವಿಷಯ/ವಸ್ತು

(D) ಮಾಲಕತ್ವ ಅಥವಾ ಹಕ್ಕು

**72**. ಸರಕುಗಳ ಮಾರಾಟ ಆಧಿನಿಯಮ, 1930 ರ ಪರಿಚ್ಛೇದ 33 ರ ಅಡಿಯಲ್ಲಿ ಕೊಂಡವನಿಗೆ ಮಾರಿದ ಸರಕುಗಳನ್ನು ಬಟವಾಡೆ ಮಾಡುವುದು/ ತಲುಪಿಸುವುದು __________ ಆಗಬಹುದು.

(A) ವಾಸ್ತವಿಕ

(B) ಸಾಂಕೇತಿಕ

(C) ರಚನಾತ್ಮಕ

(D) (A) ಅಥವಾ (B) ಅಥವಾ (C) ಗಳಲ್ಲೊಂದು

**73**. ಒಂದು ಕಂಪೆನಿಯ ನಿರ್ದೇಶಕನನ್ನು ಯಾರು ತೆಗೆದುಹಾಕಬಹುದು ?

(A) ಷೇರುದಾರರು

(B) ಕೇಂದ್ರ ಸರಕಾರ

(C) ಕಂಪೆನಿ ಕಾನೂನು ಮಂಡಳಿ

(D) (A), (B) ಮತ್ತು (C) ಎಲ್ಲ ಸರಿ

**74**. ಈ ಕೆಳಗಿನ ಹೇಳಿಕೆಗಳಿಂದ ಸರಿಯಾದ ಕಾನೂನುಬದ್ಧ ತತ್ವವನ್ನು ಹುಡುಕಿರಿ.

(A) ಅಗತ್ಯವಿರುವ ಅಥವಾ ಉದ್ದೇಶ ಸಾಧನೆಗೆ ಪ್ರಾಸಂಗಿಕವಾದ ಅಥವಾ ಅಧಿನಿಯಮದಿಂದ ಅನ್ಯಥಾ ಅಧಿಕೃತಗೊಂಡಿರದಿದ್ದ ಕಾರ್ಯವನ್ನು ಒಂದು ಕಂಪೆನಿ ಮಾಡಬಹುದು.

(B) ಅಗತ್ಯವಿರುವ ಅಥವಾ ಉದ್ದೇಶ ಸಾಧನೆಗೆ ಪ್ರಾಸಂಗಿಕವಾದ ಅಥವಾ ಅಧಿನಿಯಮದಿಂದ ಅನ್ಯಥಾ ಅಧಿಕೃತಗೊಂಡಿರದಿದ್ದ ಕಾರ್ಯವನ್ನು ಒಂದು ಕಂಪೆನಿ ಮಾಡದೆಯೂ ಇರಬಹುದು.

(C) ಅಗತ್ಯವಿರುವ ಅಥವಾ ಉದ್ದೇಶ ಸಾಧನೆಗೆ ಪ್ರಾಸಂಗಿಕವಾದ ಅಥವಾ ಅಧಿನಿಯಮದಿಂದ ಅನ್ಯಥಾ ಅಧಿಕೃತಗೊಂಡ ಕಾರ್ಯವನ್ನು ಒಂದು ಕಂಪೆನಿ ಮಾಡಬಹುದು.

(D) ಅಗತ್ಯವಿರುವ ಅಥವಾ ಗುರಿ ಸಾಧನೆಗೆ ಪ್ರಾಸಂಗಿಕವಾಗಿರದ ಅಥವಾ ಅಧಿನಿಯಮದಿಂದ ಅನ್ಯಥಾ ನಿಷೇಧಿಸಲ್ಪಟ್ಟ ಕಾರ್ಯವನ್ನು ಒಂದು ಕಂಪೆನಿ ಮಾಡಬಹುದು.

**75**. ಒಬ್ಬ ವ್ಯಕ್ತಿಯು _________ ಗಿಂತ ಹೆಚ್ಚು ಕಂಪೆನಿಗಳಲ್ಲಿ ನಿರ್ದೇಶಕನಾಗಿರಲು ಸಾಧ್ಯವಿಲ್ಲ.

(A) 15 ಕಂಪೆನಿ

(B) 7 ಕಂಪೆನಿ

(C) 20 ಕಂಪೆನಿ

(D) 5 ಕಂಪೆನಿ

**71.** The word 'property' in the Sale of Goods Act, 1930 means

(A) seller or transferer

(B) buyer or purchaser

(C) goods or subject matter

(D) ownership or title

**72.** Delivery of goods sold to the buyer under Section 33 of the Sale of Goods Act, 1930 can be

(A) Actual

(B) Symbolical

(C) Constructive

(D) Either (A) or (B) or (C)

**73.** Director of a company can be removed by

(A) The share holders

(B) Central Government

(C) Company Law Board

(D) All (A), (B) and (C) are correct

**74.** Find correct legal principle from the following statements :

(A) A company may do an act which is necessary for or incidental to the attainment of its objects or which is otherwise not authorised by the Act.

(B) A company may not do an act which is necessary for or incidental to the attainment of its objects which is otherwise not authorised by the Act.

(C) A company may do an act which is necessary for or incidental to the attainment of its objects or which is otherwise authorised by the Act.

(D) A company may do an act which is necessary for or not incidental to attainment of its goals or which is otherwise banned by the Act.

**75.** A person can not a director in more than

(A) 15 Companies

(B) 7 Companies

(C) 20 Companies

(D) 5 Companies

ಚಿತ್ತು ಬರಹಕ್ಕಾಗಿ ಸ್ಥಳ
Space for Rough Work